ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ

ಕನ್ನಡ ಅಧ್ಯಯನ ವಿಭಾಗ

ಪಿಹೆಚ್.ಡಿ ಅಧ್ಯಯನ ವಿಷಯ

ಆರ್.ಸಿ.ಮುದ್ದೇಬಿಹಾಳ ಅವರ ಜೀವನ ಮತ್ತು ಸಾಹಿತ್ಯ

ಪಿಹೆಚ್.ಡಿ. ಅಧ್ಯಯನಕ್ಕಾಗಿ ಸಲ್ಲಿಸುತ್ತಿರುವ ಪ್ರಬಂಧದ ಪೂರ್ವಭಾವಿ ಸಾರಲೇಖ

ಸಂಶೋಧನ ವಿದ್ಯಾರ್ಥಿನಿ

ರುಕ್ಮವ್ವ ಶಂ. ಮಂಟೂರ

ಮಾರ್ಗದರ್ಶಕರು

ಪ್ರೊ. ಮಹೇಶ ಚಿಂತಾಮಣಿ

ಪ್ರಾಧ್ಯಾಪಕರು,
ಕನ್ನಡ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

2020

ಪರಿವಿಡಿ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ – ೧ ಆರ್.ಸಿ.ಮುದ್ದೇಬಿಹಾಳ ಅವರ ಜೀವನ

೧.೧ ಆರ್.ಸಿ.ಮುದ್ದೇಬಿಹಾಳ ಅವರ ಜನನ, ಬಾಲ್ಯ, ಶಿಕ್ಷಣ, ಕೌಟುಂಬಿಕ ಜೀವನ, ದಿನಚರಿ, ಆಸಕ್ತಿ, ಅಭಿರುಚಿ, ವೃತ್ತಿ ಜೀವನ, ನಿವೃತ್ತಿ ಜೀವನ

೧.೨ ಆರ್.ಸಿ.ಮುದ್ದೇಬಿಹಾಳ ಅವರ ಸಮಗ್ರ ಸಾಹಿತ್ಯ ಮತ್ತು ಪ್ರಶಸ್ತಿಗಳು

ಅಧ್ಯಾಯ – ೨ ಆಯುರ್ವೇದ ವೈಧ್ಯಸಾಹಿತ್ಯ ಪರಂಪರೆ

ಅಧ್ಯಾಯ – ೩ ಆರ್.ಸಿ.ಮುದ್ದೇಬಿಹಾಳ ಅವರ ವೈದ್ಯ ಸಾಹಿತ್ಯ

೨.೧ ದೇಶಿ ಔಷಧಿಯ ಮಹತ್ವ

೨.೨ ಆಹಾರ ಪದ್ಧತಿ

ಅಧ್ಯಾಯ – ೪ ಆರ್.ಸಿ.ಮುದ್ದೇಬಿಹಾಳ ಅವರ ಮಹಾಕಾವ್ಯಗಳು

೪.೧ ದೇಶಪ್ರೇಮ

೪.೨ ನೈತಿಕ ಮೌಲ್ಯಗಳು

೪.೩ ಆದರ್ಶಗಳು

ಅಧ್ಯಾಯ –೫ ಆರ್.ಸಿ.ಮುದ್ದೇಬಿಹಾಳ ಅವರ ಕವನ ಸಂಕಲನಗಳು

೫.೧ ಸಾಮಾಜಿಕ ಚಿಂತನೆ

೫.೨ ಮಾನವೀಯ ಮೌಲ್ಯಗಳ ಹುಡುಕಾಟ

೫.೩ ಜಾತಿ ಮತ್ತು ಲಿಂಗ ಸಮಾನತೆ

ಅಧ್ಯಾಯ – ೬ ಆರ್.ಸಿ.ಮುದ್ದೇಬಿಹಾಳ ಅವರ ಮಕ್ಕಳ ಸಾಹಿತ್ಯ

೬.೧ ಪರಿಸರ ಪ್ರೇಮ

೬.೨ ಭಾಷಾಭಿಮಾನ

೬.೩ ನೈತಿಕ ಮೌಲ್ಯ

ಅಧ್ಯಾಯ – ೭ ಅನುವಾದ ಸಾಹಿತ್ಯ

ಅಧ್ಯಾಯ – ೮ ಆರ್.ಸಿ.ಮುದ್ದೇಬಿಹಾಳ ಅವರ ಇತರ ಸಾಹಿತ್ಯ

೮.೧ ನಾಟಕ

೮.೨ ಕಥನ ಕಾವ್ಯ

೮.೩ ಆತ್ಮ ಚರಿತ್ರೆ

೮.೪ ಕಥಾ ಸಂಕಲನ

ಅಧ್ಯಾಯ – ೯ ಆರ್.ಸಿ.ಮುದ್ದೇಬಿಹಾಳ ಅವರ ಸಾಹಿತ್ಯದ ಭಾಷಾಶೈಲಿ

ಸಮಾರೋಪ

ಅನುಬಂಧ

೧. ಗ್ರಂಥಋಣ

೨. ಆರ್.ಸಿ.ಮುದ್ದೇಬಿಹಾಳ ಅವರ ವಂಶವೃಕ್ಷ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯಕ್ಕೆ ಸುಮಾರು ಸಾವಿರ ವರ್ಷಗಳ ಸುಧೀರ್ಘವಾದ ಇತಿಹಾಸವಿದೆ. ಈ ದೀರ್ಘವಾದ ಇತಿಹಾಸಕ್ಕೆ ಅನೇಕ ಕವಿಗಳು, ಸಾಹಿತಿಗಳು, ಬರಹಗಾರರು, ಮಾರ್ಗದರ್ಶಕರಾಗಿದ್ದಾರೆ. ಆದಿಕವಿ ಪಂಪನಿಂದ ಆಧುನಿಕ ಕವಿಗಳಾದ ಕುವೆಂಪು, ಬೆಂದ್ರೇ, ಕಾರಂತರವರೆಗೆ ನೂರಾರು ಕವಿಗಳು ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇಂತಹ ನೂರಾರು ಬರಹಗಾರರು ಕೆಲವು ಲೇಖಕರು ಎಲೆ ಮರೆಯ ಕಾಯಿಯಂತೆ ಇದ್ದು ಅವರ ಸಾಹಿತ್ಯ ಬೆಳಕಿನಿಂದ ಮರೆಯಾಗಿದೆ. ಅಂತಹ ಬರಹಗಾರರಲ್ಲಿ ವಿಜಯಪುರ ಆರ್.ಸಿ.ಮುದ್ದೇಬಿಹಾಳ ಅವರು ಒಬ್ಬರು. ತ್ರಿಪದಿ, ಮಹಾಕಾವ್ಯ, ನಾಟಕ, ಕಥೆ, ಕವನ ಮುಂತಾದ ಒಟ್ಟು ೩೯ ಕೃತಿಗಳನ್ನು ರಚಿಸಿ ಕನ್ನಡ ಸಾರಸ್ವತ ಲೋಕಕ್ಕೆ ಅಮೂಲ್ಯ ಕಾಣಿಕೆಯನ್ನು ನೀಡಿದ್ದಾರೆ. ಜೊತೆಗೆ ಆಯುರ್ವೇದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ೧೫ ಪುಸ್ತಕಗಳನ್ನು ಇವರು ರಚಿಸಿದ್ದಾರೆ. ಇವರ ಆಯುರ್ವೇದ ಕೃತಿಗಳಂತು ಆಧುನಿಕ ವೈದ್ಯಕೀಯ ಲೋಕಕ್ಕೆ ಸವಾಲಾಗಿರುವ ಕೆಲವು ಸಮಸ್ಯೆಗಳಿಗೆ ಸೂಕ್ತ ಔಷಧಿಯ ಮಾಹಿತಿಯನ್ನು ಒದಗಿಸುತ್ತವೆ.

ಇವರ ಸಾಹಿತ್ಯದ ಕುರಿತು ಇದುವರೆಗೂ ಅಧ್ಯಯನಗಳು ನಡೆದಿಲ್ಲವೆಂದು ತಿಳಿದು ಬಂತು. ಈ ಹಿನ್ನೆಲೆಯಲ್ಲಿ ಇವರ ಸಾಹಿತ್ಯವನ್ನು ವೈದ್ಯಕೀಯ ಮತ್ತು ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗುವುದು. ಇವರ ಒಟ್ಟು ಕೃತಿಗಳನ್ನು ಅಧ್ಯಯನದ ವ್ಯಾಪ್ತಿಗೆ ಅಳವಡಿಸಿಕೊಳ್ಳಲಾಗುವುದು.

ಅಧ್ಯಾಯ – ೧ : ಆರ್.ಸಿ.ಮುದ್ದೇಬಿಹಾಳ ಅವರ ಜೀವನ

ಅಧ್ಯಾಯ ಒಂದರಲ್ಲಿ ಆರ್.ಸಿ.ಮುದ್ದೇಬಿಹಾಳ ಅವರ ಜನನ, ಬಾಲ್ಯ, ಶಿಕ್ಷಣ, ಕೌಟುಂಬಿಕ ಜೀವನ, ದಿನಚರಿ, ಆಸಕ್ತಿ, ಅಭಿರುಚಿ, ವೃತ್ತಿ ಜೀವನ, ನಿವೃತ್ತಿ ಜೀವನವನ್ನು

ಪರಿಚಯಿಸಲಾಗುವುದು. ಅವರು ಬರೆದ ಸಮಗ್ರ ಕೃತಿಗಳ ವಿವರ ಮತ್ತು ಪ್ರಶಸ್ತಿಗಳ ಬಗ್ಗೆ ಇಲ್ಲಿ ಮಾಹಿತಿ ನೀಡಲಾಗುವುದು.

ಅಧ್ಯಾಯ – ೨ ಆಯುರ್ವೇದ ವೈಧ್ಯ ಸಾಹಿತ್ಯ ಪರಂಪರೆ

ಈ ಅಧ್ಯಾಯದಲ್ಲಿ ಭಾರತೀಯ ಆಯುರ್ವೇದ ವೈಧ್ಯ ಸಾಹಿತ್ಯದ ಇತಿಹಾಸ ಮತ್ತು ಪರಂಪರೆಯ ಕುರಿತು ವಿವರಿಸಲಾಗುವುದು.

ಅಧ್ಯಾಯ – ೩ : ಆರ್.ಸಿ.ಮುದ್ದೇಬಿಹಾಳ ಅವರ ವೈದ್ಯ ಸಾಹಿತ್ಯ

ಈ ಅಧ್ಯಾಯದಲ್ಲಿ ಆರ್.ಸಿ.ಮುದ್ದೇಬಿಹಾಳ ಅವರ ವೈದ್ಯ ಸಾಹಿತ್ಯದ ಕುರಿತು ಅಧ್ಯಯನ ಮಾಡಲಾಗುವುದು. ಆಯುರ್ವೇದ ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಸಿದಂತೆ ಒಟ್ಟು ಹದಿನೈದು ಕೃತಿಗಳನ್ನು ಇವರು ರಚಿಸಿದ್ದಾರೆ. ನಿಸರ್ಗ ಸಹಜವಾಗಿಯೆ ಮನುಷ್ಯ ಕೆಲವು ರೋಗಗಳಿಗೆ ತುತ್ತಾಗುತ್ತಾನೆ. ಇಂತಹ ರೋಗಕ್ಕೆ ಪ್ರತಿರೋಧವನ್ನು ಕಂಡುಕೊಂಡು ತನಗೆ ಎದುರಾದ ಸಮಸ್ಯೆಗಳನ್ನು ಮನುಷ್ಯ ಪರಿಹರಿಸಿಕೊಳ್ಳುತ್ತಾ ನಡೆದಿದ್ದಾನೆ. ಇಂತಹ ಅನೇಕ ಔಷಧಿಯ ಗುಣವಿರುವ ಪದಾರ್ಥಗಳು ನಮ್ಮ ಅಡುಗೆ ಮನೆಯಲ್ಲಿಯೇ ಇವೇ. ಗಿಡಮೂಲಿಕೆಗಳಿಂದ ಯಾವೆಲ್ಲ ಉಪಯೋಗಗಳಿವೆ ಎಂಬುದನ್ನು ಆರ್.ಸಿ.ಮುದ್ದೇಬಿಹಾಳ ಅವರು ತಮ್ಮ ಆಯುರ್ವೇದ ವೈದ್ಯ ಸಾಹಿತ್ಯದಲ್ಲಿ ವಿವರಿಸಿದ್ದಾರೆ.

ಉದಾಹರಣೆ :

- ಬಳ್ಳೊಳ್ಳಿ ಪಳಕೊಂದು ಒಳ್ಳೆಯ ಮೆಣಸೊಂದು

  ತುಳಸಿಯ ರಸವು ಒಂದುಹನಿ । ಇವುಗೂಡಿ
  ಒಳಿತಾಗಿ ಅರೆದು ವಟಿಮಾಡಿ ॥
  ಮುಂಜಾನೆ ಗುಳಿಗೊಂದು ಸಂಜೆಗಿ ಇನ್ನೊಂದು
  ಅಂಜದೆ ನಿತ್ಯ ನುಂಗಿದರೆ । ತಂಗೆವ್ವ
  ಅಂಜಿ ಆ ಕೆಮ್ಮು ಹೊಯ್ತವ್ವ

- ಹಾವು ಕಚ್ಚಾದಂತ ಯಾವೂರಿಗ್ಹೊಂಟೆಯ್ಯ
  ತುಳಸಿಯ ಬೇರ ತೇಯಯ್ಯ । ಬೆಣ್ಣ್ಯಾಗ
  ಕಡಿತಕ್ಕೆ ಹಚ್ಚಿ ನೋಡಯ್ಯ ॥

- ತುಳಸಿಯ ಗಿಡದಿಂದ ತುಳಸಿಯ ಎಲಿತಂದು
  ಹಿಡಿಯಷ್ಟು ಬೇಗ ತಿನ್ನಯ್ಯ । ಬಹುಬೇಗ
  ವಿಷವೆಲ್ಲ ಇಳಿದು ಹೊಯ್ತಯ್ಯ ॥

ಹೀಗೆ ಹಾವು ಕಡಿತಕ್ಕೆ, ಚೇಳು ಕಡಿತಕ್ಕೆ, ಹುರುಕಿಗೆ, ಬಂಜೆತನಕ್ಕೆ, ಬಾಣಂತಿ ಬೇನೆ, ಅನೇಕ ತರಹದ ರೋಗಗಳಿಗೆ ದೇಶಿ ಔಷಧಿಯೇ ಮದ್ದು. ಇಂತಹ ಅನೇಕ ಬಗೆಯ ಔಷಧಿಯ ಮಾಹಿತಿಯು ಆರ್.ಸಿ.ಮುದ್ದೇಬಿಹಾಳ ಅವರ ಕೃತಿಗಳಲ್ಲಿವೆ. ಆಯುರ್ವೇದ ವೈದ್ಯಕೀಯಕ್ಕೆ ಸಂಬಂಧಿಸಿದ ಇವರ ಕೃತಿಗಳ ಕುರಿತು ಇಲ್ಲಿ ವಿಶ್ಲೇಷಿಸಲಾಗುವುದು.

ಅಧ್ಯಾಯ – ೪ ಆರ್.ಸಿ.ಮುದ್ದೇಬಿಹಾಳ ಅವರ ಮಹಾಕಾವ್ಯಗಳ ಸಾಹಿತ್ಯ

ಮೂರನೇಯ ಅಧ್ಯಾಯದಲ್ಲಿ ಇತಿಹಾಸದ ವ್ಯಕ್ತಿಗಳಾದ ಬಸವಣ್ಣ ಮತ್ತು ಸಿಂಧೂರ ಲಕ್ಷ್ಮಣರ ಕುರಿತು ರಚಿಸಿದ ಮಹಾಕಾವ್ಯಗಳ ಕುರಿತು ಅಧ್ಯಯನ ಮಾಡಲಾಗುವುದು. ಧರ್ಮಗುರು. ಬಸವಣ್ಣನವರನ್ನು ಕುರಿತು ರಚಿಸಲಾದ ಸಾಹಿತ್ಯ ವಿಪುಲವಾಗಿದೆ. ಮತ್ತಾರನ್ನು ಕುರಿತು ಇಷ್ಟೊಂದು ಕೃತಿಗಳು ಹೊರಬರಲಿಕ್ಕಿಲ್ಲ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಬಸವಣ್ಣನವರ ಬದುಕು ಸಾಧನೆಗಳ ಸಂಗಮ. ಅವರದ್ದು ಪರಿವರ್ತನಶೀಲ ಬದುಕು. ವ್ಯಕ್ತಿ ಮತ್ತು ಸಮಾಜದ ಪರಿವರ್ತನೆಯೆ ಅವರ ಗುರಿಯಾಗಿತ್ತು. ಆದರ್ಶವಿಲ್ಲದ ಬದುಕು ವ್ಯರ್ಥ, ಆದರ್ಶ ಪ್ರಧಾನವಾದ ಬದುಕು ಸಾರ್ಥಕ ಆದರ್ಶಗಳು ಜೀವನದ ಅಮರ ಫಲ. ಕೆಲವರ ಬದುಕಿನಲ್ಲಿ ಆದರ್ಶವೇ ಪ್ರಧಾನವಾಗಿರುತ್ತದೆ. ಅಧಿಕಾರಕ್ಕಾಗಿ ಬಡಿದಾಡುವ ವ್ಯಕ್ತಿಗಳು ಯಾವ ರಾಜಿಗೂ ಸಿದ್ಧರಿರುತ್ತಾರೆ. ಆದರ್ಶವಾದಿಗಳು ಎಂಥ ವಿಷಮ ಸಂದರ್ಭ ಬಂದೊದಗಿದರು ಪಟ್ಟಭದ್ರರೊಂದಿಗೆ ರಾಜಿ ಮಾಡಿಕೊಳ್ಳಲು ಬಯಸುವುದಿಲ್ಲ. ಅಧಿಕಾರ ಮತ್ತು ಆದರ್ಶ ಎರಡು

ಒಂದು ಕಡೆ ಇರಲು ಸಾಧ್ಯವಿಲ್ಲ. ಅಧಿಕಾರಬೇಕೆಂದರೆ ಆದರ್ಶದಿಂದ ದೂರ ಉಳಿಯಬೇಕಾಗುತ್ತದೆ. ಆದರೆ ಬಸವಣ್ಣನವರ ಬದುಕಿನಲ್ಲಿ ಈ ಮಾತು ಅನ್ವಯಿಸುವುದಿಲ್ಲ.

ಬಸವಣ್ಣನವರು ಅಧಿಕಾರ ಮತ್ತು ಆದರ್ಶದೊಂದಿಗೆ ಬದುಕಿದವರು. ಹೀಗಾಗಿ ಅವರು ವಿಶ್ವ ಮಾನವರಾಗಿ ಇವತ್ತಿಗೂ ಕೂಡಾ ಜೀವಂತವಾಗಿದ್ದಾರೆ. ಇಂತಹ ಮಹಾನ್ ವ್ಯಕ್ತಿಯ ಕುರಿತು ಸುಮಾರು ಎಂಟನೂರು ವರ್ಷಗಳಿಂದ ಕೃತಿಗಳು ರಚನೆಯಾಗುತ್ತಲೆ ಇವೆ. ಹಾಗೆಯೆ ಆರ್.ಸಿ.ಮುದ್ದೇಬಿಹಾಳ ಅವರು ಸಹ "ಬಸವ ಬೆಳಗು" ಎಂಬ ಮಹಾಕಾವ್ಯ ಬಸವಣ್ಣನವರನ್ನು ಕೇಂದ್ರವಾಗಿಸಿರಿಕೊಂಡು ರಚಿಸಿದ್ದಾರೆ.

ಆರ್.ಸಿ.ಮುದ್ದೇಬಿಹಾಳ ಅವರ ಇನ್ನೊಂದು ಮಹಾಕಾವ್ಯ 'ಸಿಂಧೂರ ಲಕ್ಷ್ಮಣ'. ಸಿಂಧೂರ ಲಕ್ಷ್ಮಣನ ಬಗ್ಗೆ ಸವಿಸ್ತಾರವಾಗಿ ವಿಷಯವನ್ನು ಸಂಗ್ರಹಿಸಿ ನೋಡಿದಾಗ ಇವನೊಬ್ಬ ಮಹಾ ಮುತ್ಸದ್ದಿ ವ್ಯಕ್ತಿಯಾಗಿದ್ದನೆಂದು ಕಂಡು ಬರುತ್ತದೆ. ದೀನ–ದಲಿತರ ಬಂಧುವಾಗಿ, ಅವರ ಉದ್ಧಾರಕ್ಕಾಗಿ ತನ್ನ ಜೀವನದುದ್ದಕ್ಕೂ ಹೋರಾಡಿದ್ದಾನೆ. ಪರಸ್ತ್ರೀಯರನ್ನು ಸೋದರಿಯಂತೆ ಕಂಡಿದ್ದಾನೆ. ಬ್ರಿಟಿಷರ ವಿರುದ್ಧ ಹೋರಾಡಿದ ಮಹಾದೇಶಭಕ್ತನೆನಿಸಿಕೊಂಡಿದ್ದಾರೆ. ತನ್ನ ಜೀವನಮಾನದಲ್ಲಿ ಒಂದು ಕೂಡಾ ಜೀವ ಹಾನಿಯನ್ನು ಮಾಡಿಲ್ಲ. ದರೋಡೆಯಿಂದ ಬಂದ ಹಣವನ್ನು ತನಗಾಗಲಿ ತನ್ನ ಬಂಧುಗಳಿಗಾಗಲಿ ನೀಡದೆ ಬಡವರಿಗೆ ದಲಿತರಿಗೆ ಹಂಚಿದನು. ಇಂತಹ ವ್ಯಕ್ತಿಯ ಕುರಿತು ಕಾವ್ಯ ರಚಿಸಿರುವುದು ಉಚಿತವಾಗಿದೆ. ಈ ಅಧ್ಯಾಯದಲ್ಲಿ ಆರ್.ಸಿ. ಮುದ್ದೇಬಿಹಾಳ ಅವರ ಮಹಾಕಾವ್ಯದಲ್ಲಿ ವ್ಯಕ್ತವಾದ ದೇಶಪ್ರೇಮ, ಆದರ್ಶ ವ್ಯಕ್ತಿತ್ವ, ಮಾನವೀಯ ಮೌಲ್ಯಗಳ ಕುರಿತು ಅಧ್ಯಯನ ಮಾಡಲಾಗುವುದು.

ಅಧ್ಯಾಯ – ೫ : ಆರ್.ಸಿ.ಮುದ್ದೇಬಿಹಾಳ ಅವರ ಕವನ ಸಂಕಲನಗಳು

ಈ ಅಧ್ಯಾಯದಲ್ಲಿ ಮುದ್ದೇಬಿಹಾಳರ ಕವನ ಸಂಕಲನಗಳ ಕುರಿತು ಅಧ್ಯಯನ ಮಾಡಲಾಗುವುದು. ಅವರ ಕವನಗಳಲ್ಲಿ ಸಾಮಾಜಿಕ ಕಳಕಳಿ ವ್ಯಕ್ತವಾಗಿದೆ. ಸಮಾಜದಲ್ಲಿ ನಡೆಯುವ ಅನ್ಯಾಯ, ದೌರ್ಜನ್ಯ, ದಬ್ಬಾಳಿಕೆಗಳಿಗೆ ಕವಿಯ ಮನ ಮರುಕಪಟ್ಟಿದೆ. ಆರ್.ಸಿ. ಮುದ್ದೇಬಿಹಾಳರು ಕೇವಲ ಒಬ್ಬ ಸಾಹಿತಿಯಾಗಿರದೆ ಸಮತಾ ಸಮಾಜವಾದಿ ಧೋರಣೆಯುಳ್ಳ ವ್ಯಕ್ತಿ ಎಂಬುದು ಅವರ ಕವನಗಳಲ್ಲಿ ವ್ಯಕ್ತವಾಗಿದೆ. ಇವರೊಬ್ಬ ಜಾತಿ ವಿರೋಧಿ ಧೋರಣೆಯುಳ್ಳವರಾಗಿದ್ದರು. ಹುಟ್ಟಿನಿಂದ ಯಾರೂ ಹೀನ ಜಾತಿಯವರಾಗಿರುವುದಿಲ್ಲ. ಹೀನತೆ ಎಂಬುದು ನಮ್ಮ ಮನಸ್ಸಿನಲ್ಲಿದೆ, ವಿಚಾರದಲ್ಲಿದೆ ಎಂದು ಹೇಳುತ್ತಾರೆ.

ಉದಾಹರಣೆ – ಹೊಲೆಯ ಹೊಲೆಯನೆನ್ನಬೇಡ
ಹೊಲಬುಗೆಟ್ಟು ಹಳಿಯಬೇಡ
ಹೊಲೆಯನೆಂಬ ಭಾವವಳಿದು
ತಳವ ಸೋಸಿ ತಿರುಳ ತಿಳಿದು
ಸಲಿಲನೆರದು ಶಾಂತಿ ನೀಡು ಜಾತಿ ಜ್ವಾಲೆಗೆ
ಹೊಲೆಸು ಕಳೆವ ನೀರಿನಂತೆ
ಮಲವ ತೊಳೆವ ತಾಯಿಯಂತೆ
ಹೊಲಸು ತೊಳೆದು ಹಸನ ಮಾಡಿ ಹೊಲೆಯನಾದನೇ?
ಕುಲೀನ ತಾ ನೀತಿಗೆಟ್ಟು
ಕೊಳಚೆಗಿಂತ ಹೊಲಸು ವಸ್ತು
ಮೆಲಿದು ಮರೆವ ಹೀನ ನರನು–ಹೊಲೆಯನಾಗನೆ?

ಶುಚಿಗೊಳಿಸುವ ಕಾರ್ಯದಲ್ಲಿ ನಿರತನಾದವನು ಹೇಗೆ ಹೊಲೆಯನಾಗುವನು. ನೀತಿಗೆಟ್ಟು ನಡೆಯುವವನೆ ನಿಜವಾದ ಹೊಲೆಯನೆಂಬುದು ಮೇಲಿನ ಕವನದ ಅರ್ಥವಾಗಿದೆ.

ಭಾರತೀಯ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣು ಕನಿಷ್ಠ, ಗಂಡು ಶ್ರೇಷ್ಠ ಎಂಬ ಭಾವ ಬೇರೂರಿದೆ. ಮಾನವಕುಲ ಸಂತತಿ ಮುಂದುವರಿಕೆಯ ಕಾರ್ಯದಲ್ಲಿ ಗಂಡಿನಷ್ಟೆ ಹೆಣ್ಣಿಗೆ ಪ್ರಾಮುಖ್ಯವಿದೆ. ಹೀಗಿದ್ದರೂ ಸಹ ಪುರುಷಪ್ರಧಾನ ವ್ಯವಸ್ಥೆ ಹೆಣ್ಣನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳುವ ಕಾರಣಕ್ಕೆ ಆಕೆಯನ್ನು ಕನಿಷ್ಠ ಸ್ಥಾನಕ್ಕೆ ತಳ್ಳಿತು. ಹೆಣ್ಣು ಗಂಡಿನ

ಆಶ್ರಯದಲ್ಲಿ ಮಾತ್ರ ಬದುಕಬಲ್ಲಳು ಎಂಬುದು ಆಕೆಯ ಮೇಲೆ ಅನೇಕ ರೀತಿಯ ಸಂಪ್ರದಾಯ, ಆಚರಣೆಗಳನ್ನು ಹೇರಿ ಅವಳನ್ನು ಅಬಲೆಯಾಗಿ ನಡೆಸಿಕೊಳ್ಳುತ್ತಾ ಬಂದಿದೆ.

ಇಂಥ ಲಿಂಗ ಅಸಮಾನತೆಯ ವಿರುದ್ಧ ಕವಿಮನ ಮರುಗಿದೆ. ಸುಂದರ ಕುಟುಂಬಕ್ಕೆ ಹೆಣ್ಣಿನ ಸಹಕಾರ, ಸಹಾನುಭೂತಿ ಇದ್ದಾಗ ಕುಟುಂಬಕ್ಕೆ ಅರ್ಥ ಬರುವುದು. ಅಂಥ ಕರುಣಾಮಯಿ ಹೆಣ್ಣನ್ನು ಸ್ಮರಿಸದೇ ನಿಂದಿಸುವುದು ಯಾವ ನ್ಯಾಯ ಎಂಬಂತೆ ಕವಿಯ ಭಾವ ಇಲ್ಲಿ ವ್ಯಕ್ತವಾಗಿದೆ.

ಉದಾಹರಣೆ – ಹೆಣ್ಣಿಗಿಂತ ಮಿಗೆ ಗಂಡು ಮಿಗಿಲು ನೀನೆನ್ನಬೇಡ ತಮ್ಮ ಹೆಣ್ಣಿನೆದುರು ನೀನ್ಯಾವಸಾಟಿ ಸರಿ ಹೇಳು ತಮ್ಮಾ ॥ ಹೀಗೆ ಈ ಅಧ್ಯಾಯದಲ್ಲಿ ಆರ್.ಸಿ.ಮುದ್ದೇಬಿಹಾಳರ ಕವನಗಳ ಕುರಿತು ವಿಮರ್ಶಿಸಲಾಗುವುದು.

ಅಧ್ಯಾಯ – ೬ : ಆರ್.ಸಿ.ಮುದ್ದೇಬಿಹಾಳ ಅವರ ಮಕ್ಕಳ ಸಾಹಿತ್ಯ

ವೈವಿಧ್ಯಮಯ ಸಾಹಿತ್ಯ ಪ್ರಕಾರಗಳಲ್ಲಿ ಮಕ್ಕಳ ಸಾಹಿತ್ಯವು ಒಂದು ವಿಶಿಷ್ಟವಾಗಿದೆ. ಮಕ್ಕಳ ಅಂತರಂಗಕ್ಕಿಳಿದು ಅವರ ಮನಸ್ಸಿಗೆ ಮುದನೀಡುವಂತಹ ಪದ್ಯ ರಚಿಸುವುದು ಸಾಹಿತಿಯ ಅಮೂಲ್ಯ ಕಾಣಿಕೆಯಾಗಿದೆ. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು ಬಾಲ್ಯದಲ್ಲಿ ಮಕ್ಕಳಿಗೆ ದೇಶ ಪ್ರೇಮ ನಿಸರ್ಗಪ್ರೇಮ, ನೈತಿಕತೆ ಮುಂತಾದ ಮೌಲ್ಯಗಳನ್ನು ಅಳವಡಿಸಿಕೊಳ್ಳುವಲ್ಲಿ ಮಕ್ಕಳ ಸಾಹಿತ್ಯದ ಗುರುತರ ಜವಾಬ್ದಾರಿಯಾಗಿದೆ. ಅಂತಹ ಜವಾಬ್ದಾರಿಯುತ ಸಾಹಿತ್ಯ ನೀಡುವಲ್ಲಿ ಆರ್.ಸಿ.ಮುದ್ದೇಬಿಹಾಳ ಅವರ ಕಾರ್ಯ ಗಮನಾರ್ಹವಾಗಿದೆ. ಆಕರ್ಷಕ ಕವನಗಳು ಕಂಠಪಾಠ ಮಾಡುವ ಮೂಲ ಮಕ್ಕಳು ಅವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವರು. ಅಂತಹ ಅನೇಕ ಕವನಗಳು ಆರ್.ಸಿ.ಮುದ್ದೇಬಿಹಾಳ ಅವರು ರಚಿಸಿದ್ದಾರೆ.

ಉದಾ – ಮನೆಯ ಸುತ್ತ ಮರವು ಇರಲು

ನೆರಳು ಆಗುವುದು
ಹಣ್ಣು ಕಾಯಿ ನಮಗೆ ।
ತಿನ್ನಲು ದೊರೆಯುವುದು
ಶುದ್ಧ ಹವೆಯು ಒಳಗು ಹೊರಗು
ಸೊಸಲು ಆನಂದ
ಇಲ್ಲಿ ಕುಳಿತು ಬುತ್ತಿ ಬಿಚ್ಚಿ
ಉಂಡರೆ ಬಲು ಚೆಂದ ॥ ಎಂದು ನಿಸರ್ಗದ ಮಹತ್ವವನ್ನು ಮಕ್ಕಳಿಗೆ ಹೇಳುತ್ತಾರೆ.

ಒಮ್ಮೆ ತಾಯಿ ಕಲಿಸಿ ನೋಡು
ನನ್ನ ನುಡಿಯ ಕನ್ನಡ
ಏನು ಸೊಂಪು ! ಏನು ಇಂಪು
ನಿನ್ನು ನುಡಿಯು ಸುಂದರ
ನೀನು ಕಲಿಸೆ ಆಗಬಹುದು
ನನ್ನ ನುಡಿಯು ಬಂಧುರ

ಹೀಗೆ ಐದನೆಯ ಅಧ್ಯಾಯದಲ್ಲಿ ಆರ್.ಸಿ.ಮುದ್ದೇಬಿಹಾಳರ ಮಕ್ಕಳ ಸಾಹಿತ್ಯವನ್ನು ಕುರಿತು ಅಧ್ಯಯನ ಮಾಡಲಾಗುವುದು.

ಅಧ್ಯಾಯ – ೭ : ಆರ್.ಸಿ.ಮುದ್ದೇಬಿಹಾಳ ಅವರ ಅನುವಾದ ಸಾಹಿತ್ಯ

ಅಧ್ಯಾಯ ಆರರಲ್ಲಿ ಆರ್.ಸಿ.ಮುದ್ದೇಬಿಹಾಳ ಅವರು ಅನುವಾದ ಸಾಹಿತ್ಯದ ಕುರಿತು ಅಧ್ಯಯನ ಮಾಡಲಾಗುವುದು. ಇವರು ಒಟ್ಟು ಮೂರು ಕೃತಿಗಳನ್ನು ಭಾಷಾಂತರಿಸಿದ್ದಾರೆ. ಶ್ರೀಮದ್ಭಗವದ್ಗೀತಾ ಗೀತ ಗೋವಿಂದ ಮತ್ತು ಇಂಗ್ಲೀಷ್ ಗೀತೆಗಳು, "ಭಗವದ್ಗೀತೆ"ಯನ್ನು ಅನೇಕ ಸಾಹಿತಿಗಳು ಕನ್ನಡದಲ್ಲಿ ಅನುವಾದಿಸಿದ್ದಾರೆ. ಆದರೂ ಇದೊಂದು ಕನ್ನಡ ಮಾದರಿಯ ಅನುವಾದ ಇರಲೆಂಬ ಭಾವದಿಂದ ಭಗವದ್ಗೀತೆಯನ್ನು ದ.ರಾ. ಬೇಂದ್ರೆಯವರ ಮೇಘದೂತ ಛಂದಸ್ಸಿನ ಜಾಡಿನಲ್ಲಿ ಅನುವಾದಿಸಿದ್ದಾರೆ ಎಂದು ಲೇಖಕರು ಹೇಳುತ್ತಾರೆ.

ಇಂಗ್ಲೀಷ ಗೀತೆಗಳಲ್ಲಿ ಬಡ ರೈತನ ಬವಣೆ, ಬದುಕಿನ ನಶ್ವರತೆ, ಮುಪ್ಪು, ಯೌವ್ವನ ಮುಂತಾದವುಗಳ ಕುರಿತು ಬರೆಯುತ್ತಾರೆ. ಜೀವನ ನೀರಿನ ಮೇಲಿನ ಗುಳ್ಳೆಯಂತೆ ಕ್ಷಣದಲ್ಲೆ ಮಾಯವಾಗಿ ಹೋಗುವಂಥದ್ದು, ಪರರಿಗೆ ಪ್ರೀತಿ, ಕರುಣೆ, ಅನುಕಂಪ ತೋರಿಸುವ ಮೂಲಕ ಜೀವನ ಸಾರ್ಥಕಗೊಳಿಸಬೇಕೆಂಬ ಧ್ವನಿ ಕವನಗಳಲ್ಲಿ ವ್ಯಕ್ತವಾಗಿದೆ.

" ನೀರಗುಳ್ಳೆಯ ತೆರದಿ ಆಗಿಹುದು ಈ ಜಗವು
ಬಲು ಅಲ್ಪವಾಗಿಹುದು ಮಾನವನ ಜೀವನವು
ಮಾನವನ ಭಾವದೊಳು ಕೆಡುಕತನ ತುಂಬಿಹುದು
ಹುಟ್ಟಿನಿಂದ ಮಸಣಕ್ಕೆ ಅದು ಹೀಗೆ ನಡೆದಿಹುದು"

ಶ್ರೀ ಮದ್ಭಗವದ್ಗೀತಾ ಮತ್ತು ಇಂಗ್ಲೀಷ ಗೀತೆಗಳಂತೆ ಗೀತಗೋವಿಂದವನ್ನು ಮೂಲಕ್ಕೆ ಚ್ಯುತಿಬಾರದಂತೆ ಕನ್ನಡದ ನೆಲಕ್ಕೆ ಹೊಂದುವಂತೆ ಲೇಖಕರು ಭಾಷಾಂತರಿಸಿದ್ದಾರೆ. ಹೀಗೆ ಈ ಅನುವಾದ ಸಾಹಿತ್ಯವನ್ನು ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ಮಾಡಲಾಗುವುದು.

ಅಧ್ಯಾಯ – ೮ : ಆರ್.ಸಿ.ಮುದ್ದೇಬಿಹಾಳ ಅವರ ಇತರೆ ಸಾಹಿತ್ಯ

ಆರ್.ಸಿ.ಮುದ್ದೇಬಿಹಾಳ ಅವರು ಒಬ್ಬ ಬಹುಮುಖ್ಯ ಪ್ರತಿಭೆಯುಳ್ಳ ಲೇಖಕರು. ಈ ಅಧ್ಯಾಯದಲ್ಲಿ ಅವರ ನಾಟಕ, ಕಥನ ಕಾವ್ಯ ಆತ್ಮಚರಿತ್ರೆ, ಕಥಾ ಸಂಕಲನ, ಕಥೆ ಮುಂತಾದ ಅವರ ಕೃತಿಗಳನ್ನು ಇಲ್ಲಿ ವಿಮರ್ಶಿಸಲಾಗುವುದು.

ಅಧ್ಯಾಯ ೯ ಆರ್.ಸಿ.ಮುದ್ದೇಬಿಹಾಳ ಅವರ ಸಾಹಿತ್ಯದ ಭಾಷಾ ಶೈಲಿ

ಈ ಅಧ್ಯಾಯದಲ್ಲಿ ಆರ್.ಸಿ.ಮುದ್ದೇಬಿಹಾಳ ಅವರು ತಮ್ಮ ಬರಹದಲ್ಲಿ ಅಳವಡಿಸಿಕೊಂಡ ಭಾಷೆ ಮತ್ತು ಶೈಲಿಯ ಕುರಿತು ಅಧ್ಯಯನ ಮಾಡಲಾಗುವುದು.

ಸಮಾರೋಪ :

ಸಮಾರೋಪದಲ್ಲಿ ಸಂಶೋಧನ ಅಧ್ಯಯನದ ಒಟ್ಟು ಫಲಿತಗಳನ್ನು ನೀಡಲಾಗುವುದು. ಮಹಾಪ್ರಬಂಧದ ಕೊನೆಗೆ ಅನುಬಂಧದಲ್ಲಿ ಛಾಯಾಚಿತ್ರಗಳನ್ನು ವಂಶ ವೃಕ್ಷ, ಹಸ್ತಾಕ್ಷರ ಲೇಖಕರ ಜೀವನದ ಪ್ರಮುಖ ಘಟನಾವಳಿಗಳು, ಗ್ರಂಥಋಣವನ್ನು ಕೊಡಲಾಗುವುದು. ಈ ಅಧ್ಯಯನದ ಮೂಲಕ ಆರ್.ಸಿ.ಮುದ್ದೇಬಿಹಾಳ ಅವರ ಸಾಹಿತ್ಯಕ್ಕೆ ಸಂಶೋಧನ ಕ್ಷೇತ್ರದಲ್ಲಿ ನ್ಯಾಯ ಒದಗಿಸುವ ಪ್ರಯತ್ನ ಮಾಡಲಾಗುವುದು.

ಸಂಶೋಧನ ವಿದ್ಯಾರ್ಥಿನಿ
ರುಕ್ಮವ್ವ ಮಂಟೂರ

ಮಾರ್ಗದರ್ಶಕರು
ಪ್ರೊ. ಮಹೇಶ ಚಿಂತಾಮಣಿ